**<u>ಸಾಕ್ಷಿಯನ್ನು ಪ್ರಮಾಣ ವಚನ ಬೋದಿಸಲಾದ ದಿನಾಂಕಃ 23-01-2024</u>**

**<u>ಪಾಟೀ ಸವಾಲುಃ ಪ್ರತಿವಾದಿ 3 ರ ಪರ ಶ್ರೀ.ಎಸ್ ಕೆ ಎನ್ ವಕೀಲರಿಂದಃ</u>**

1. ನನ್ನ ತಂದೆ ಸಲ್ಲಿಸಿದ್ದ ಪ್ರತಿವಾದ ಪತ್ರವನ್ನು ನಾನು ಓದಿ ತಿಳಿದುಕೊಂಡಿದ್ದೆನೆ. ನಮ್ಮ ತಂದೆ ಸಲ್ಲಿಸಿದ ಪ್ರತಿವಾದ ಪತ್ರದಲ್ಲಿ ತೋರಿಸಲಾದ ವಂಶಾವಳಿ ಹಾಗೂ ಬೇರೆ ವಿಷಯಗಳು ಸುಳ್ಳು ಇವೆ. ವಂಶಾವಳಿಯಲ್ಲಿ ನನ್ನ ಹೆಂಡತಿಯ ಹೆಸರು ತೋರಿಸಿದ್ದಾರೆ ಅದು ತಪ್ಪು ಇದೆ. ನನ್ನ ಹೆಂಡತಿಯ ಹೆಸರು ಸೇರಿಸಿರುವುದನ್ನು ಬಿಟ್ಟು ಬೇರೆ ವಿಷಯಗಳು ವಂಶಾವಳಿಯಲ್ಲಿ ಸರಿ ಇದೆ. ನಿಮ್ಮ ಹೆಂಡತಿ ಈ ದಾವೆಯಲ್ಲಿ ಪ್ರತಿವಾದ ಪತ್ರ ಸಲ್ಲಿಸಿಲ್ಲ ಎಂದರೆ ಸಾಕ್ಷಿಯು ಜಂಟಿಯಾಗಿ ಸಲ್ಲಿಸಲಾಗಿದೆ ಎಂದು ಹೇಳುತ್ತಾರೆ. ನಾನು ನನ್ನ ಪ್ರಮಾಣ ಪತ್ರದಲ್ಲಿ ನನ್ನ ಪರವಾಗಿ ಮತ್ತು ನನ್ನ ಹೆಂಡತಿ ಪರವಾಗಿ ಸಾಕ್ಷಿ ನುಡಿಯುತ್ತಿದ್ದೆನೆ ಎಂದು ಬರೆಸಿದ್ದೆನೆ ಅಥವಾ ಇಲ್ಲ ಎಂದು ನೆನಪಿಲ್ಲ. ನನ್ನ ಹೆಂಡತಿ ನನಗೆ ಅವರ ಪರವಾಗಿ ಸಾಕ್ಷಿ ನುಡಿಯಲು ಅಧಿಕಾರ ಪತ್ರ ಬರೆದುಕೊಟ್ಟಿದ್ದಾರೆ ಅಥವಾ ಇಲ್ಲ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ನನ್ನ ಹೆಂಡತಿ ಪ್ರತಿವಾದಿ ನಂ.4 ರವರ ಸಾಕ್ಷಿ ಮಾಡಿಸುವುದಿಲ್ಲ. ನನ್ನ ಹೆಂಡತಿ ಬಂದರೆ ಸತ್ಯಾಂಶ ಹೊರಬರುತ್ತದೆ ಎಂದು ಅವರ ಕಡೆಯಿಂದ ಪ್ರತಿವಾದ ಪತ್ರ ಸಲ್ಲಿಸಿಲ್ಲ ಹಾಗೂ ಅವರ ಪ್ರಮಾಣ ಪತ್ರ ಸಹ ಸಲ್ಲಿಸಿಲ್ಲ ಅವರ ಬಳಿಯಿಂದ ಅಧಿಕಾರ ಪತ್ರವನ್ನು

ಪಡೆಯದೆ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೆಂಡತಿಗೆ ಈ ದಾವೆಯಲ್ಲಿ ಸಾಕ್ಷಿ ನುಡಿಯದಂತೆ ಹೊರಗಡೆ ಇಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹಾಗೂ ಪ್ರತಿವಾದಿ ನಂ.3 ರವರ ವಿದ್ಯಾಬ್ಯಾಸದ ಖರ್ಚುಗಳನ್ನು ನಮ್ಮ ತಂದೆ ಭರಿಸಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.3 ರವರು ಹಾಸ್ಟೆಲನಲ್ಲಿ ಇರುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ಪ್ರತಿವಾದಿ ನಂ.3 ರವರ ವಿದ್ಯಾಬ್ಯಾಸಕ್ಕಾಗಿ ನಾನು ಏನು ಖರ್ಚು ಮಾಡಿದ್ದೇನೆ ಎನ್ನುವ ಕುರಿತು ವಿಷಯ ಬರೆಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂ.3 ರವರು ವಿದ್ಯಾಬ್ಯಾಸ ಮುಗಿದ ತಕ್ಷಣವೆ ವಕೀಲ ವೃತ್ತಿ ಆರಂಭ ಮಾಡಿದರು ಎಂದರೆ ನಿಜ. ಹುಬ್ಬಳಿಯಲ್ಲಿ ಪ್ರತಿವಾದಿ ನಂ.3 ರವರು ಹೆಸರುವಾಸಿ ವಕೀಲರು ಎಂದರೆ ಸರಿಯಲ್ಲ. ಪ್ರತಿವಾದಿ ನಂ.3 ರವರು ಅಂಬಿಕಾ ನಗರ ಹುಬ್ಬಳ್ಳಿಯಲ್ಲಿ ನಿವೇಶನ ಖರೀದಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ ಸಾಕ್ಷಿಯು ಅದರ ದಾಖಲೆಗಳನ್ನು ಹಾಜರು ಮಾಡಿದ್ದೇನೆ ಎಂದು ಹೇಳುತ್ತಾರೆ. ಪ್ರತಿವಾದಿ ನಂ.3 ರವರು ಬ್ಯಾಂಕಿನಿಂದ ಸಾಲವನ್ನು ಪಡೆದು ಸದರಿ ನಿವೇಶನದಲ್ಲಿ ಕಟ್ಟಡವನ್ನು ಕಟ್ಟಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.3 ರವರ ಮನೆಯನ್ನು ಕಟ್ಟಿದ್ದಾರೆ ಆದರೆ ಯಾವ ಹಣದಿಂದ ಕಟ್ಟಿದ್ದಾರೆ ನನಗೆ ಗೊತ್ತಿಲ್ಲ. ನನಗೆ ಪ್ಲಾಟ ಖರೀದಿ ವಿಷಯ ಗೊತ್ತಿಲ್ಲ ಎಂದರೆ ಸರಿಯಲ್ಲ. ನನಗೆ ಸದರಿ

ನಿವೇಶನದ ಎಲ್ಲಾ ವ್ಯವಹಾರ ಗೊತ್ತಿಲ್ಲ. ನನಗೆ ಸದರಿ ನಿವೇಶದ ಖರೀದಿ ಆಗಿರುವ ವಿಚಾರ ಬಿಟ್ಟು ಬೇರೆ ವ್ಯವಹಾರ ಗೊತ್ತಿಲ್ಲ. ನಾನು ಪ್ರತಿವಾದಿ ನಂ.3 ರವರು ನಿವೇಶನ ಖರೀದಿಸಿರುವ ದಾಖಲೆ ಹಾಜರು ಮಾಡಿರುವುದನ್ನು ನೋಡಿದ್ದೇನೆ. ಪ್ರತಿವಾದಿ ನಂ.3 ರವರು ನಿವೇಶನ ಖರೀದಿಸಲು ಎಮ್ ಜಿ ಬ್ಯಾಂಕನಿಂದ ಸಾಲವನ್ನು ಪಡೆದಿದ್ದಾರೆ ಹಾಗೂ ಅದರಲ್ಲಿ ಕಟ್ಟಡ ಕಟ್ಟಲು ಕಾರ್ಪೊರೇಶನ ಬ್ಯಾಂಕಿನಿಂದ ಸಾಲವನ್ನು ಪಡೆದಿದ್ದಾರೆ ಎಂದರೆ ಸರಿಯಲ್ಲ.

2. ಪ್ರತಿವಾದಿ ನಂ.3 ರವರು ಕಚೇರಿಗಾಗಿ ಖರೀದಿಸಿರುವ ಸಿಟಿಎಸ್ ನಂ.127/ಎ ಸ್ವತ್ತಿನ ಬಗ್ಗೆ ಗೊತ್ತು. ನನಗೆ ಸದರಿ ಸ್ವತ್ತಿ ಖರೀದಿ ವ್ಯವಹಾರದ ಬಗ್ಗೆ ಗೊತ್ತಿಲ್ಲ. ದಾಖಲೆ ಬಗ್ಗೆ ಗೊತ್ತು ಹಾಜರು ಮಾಡಿದ್ದೇನೆ. ಸದರಿ ಸಿಟಿಎಸ್ ನಂ.127/ಎ ಕಚೇರಿಯಲ್ಲಿ ಎಷ್ಟು ಹಣ ಖರ್ಚು ಮಾಡಿ ಪರ್ನಿಚರ ಹಾಗೂ ಪಿಚ್ಚರಗಳನ್ನು ಅಳವಡಿಸಲಾಗಿದೆ ಗೊತ್ತಿಲ್ಲ. ಸದರಿ ಸ್ವತ್ತಿನ ಚಕ್ಕಬಂದಿ ಗೊತ್ತಿಲ್ಲ. ಸದರಿ ಕಚೇರಿ ಭವಾನಿ ಆರ್ಕೆಡ ನಲ್ಲಿ ಇದೆ. ಅವರ ಕಚೇರಿ ಭವಾನಿ ಆಕೇಡನಲ್ಲಿ ಇರುವ ವಿಚಾರ ನನಗೆ ಸುಮಾರು 6-7 ವರ್ಷಗಳ ಹಿಂದೆ ತಿಳಿದಿದೆ. ಸದರಿ ಕಚೇರಿ ಪ್ರಾರಂಭ ಆದ ನಂತರ ನನಗೆ ತಿಳಿದಿದೆ. ಪ್ರತಿವಾದಿ ನಂ.3 ರವರು ಖರೀದಿಸಿದ್ದಾರೆ ಎನ್ನಲಾದ ಸದರಿ ಎರಡು ಸ್ವತ್ತುಗಳ ಖರೀದಿ ಪತ್ರಗಳಲ್ಲಿ ನಾನು ಸಹಿ ಮಾಡಿಲ್ಲ. ಸದರಿ

ಎರಡು ಖರೀದಿ ಪತ್ರಗಳನ್ನು ನಾನು ನೋಡಿಲ್ಲ. ಸದರಿ ಎರಡು ಸ್ವತ್ತುಗಳನ್ನು ಪ್ರತಿವಾದಿ ನಂ.3 ರವರು ಸಾಲವನ್ನು ಮಾಡಿ, ಸ್ವಂತ ಖರ್ಚು ಮಾಡಿ ಖರೀದಿಸಿರುವ ಅವರ ಸ್ವಯಾರ್ಜಿತ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ಸಿಟಿಎಸ್ ನಂ.127/ಎ ಸ್ವತ್ತನ್ನು ಖರೀದಿಸಿಸಲು ಪ್ರತಿವಾದಿ ನಂ.3 ರವರು ರೂ.4,50,000/- ಎಸ್.ಬಿ.ಐ. ಶಾಖೆ ಹಿರೇಪೇಟ ಹುಬ್ಬಳ್ಳಿಯಿದ ಪಡೆದು ಖರೀದಿಸಿದ್ದಾರೆ ಎಂದರೆ ಸರಿಯಲ್ಲ.

3. ಮಂಗ್ಯಾನ ಕೊಪ್ಪ ಗ್ರಾಮದ ಸರ್ವೆ ನಂ.68/1 ಜಮೀನು ಪರಸಪ್ಪ ಹುಳೆದ ರವರ ಹೆಸರಿನಲ್ಲಿ ಇದೆ. ಸದರಿ ಜಮೀನನ್ನು 7-8 ವರ್ಷಗಳ ಹಿಂದೆ ಕುಲಕರ್ಣಿ ರವರಿಂದ ಪರಸಪ್ಪ ರವರ ಹೆಸರಿನಲ್ಲಿ ಖರೀದಿಸಲಾಗಿದೆ. ಖರೀದಿ ಪತ್ರವನ್ನು ನೋಡಿದ್ದೇನೆ. ಎಷ್ಟು ಹಣಕ್ಕೆ ಖರೀದಿಸಲಾಗಿದೆ ನೆನಪಿಲ್ಲ. ಸದರಿ ಜಮೀನಿನ ಚಕ್ಕಬಂದಿ ನೆನಪಿಲ್ಲ. ನನಗೆ ಸದರಿ ಜಮೀನಿನ ವ್ಯವಹಾರದ ಕುರಿತು ಆಗಲಿ, ದಾಖಲೆಗಳ ಕುರಿತು ಆಗಲಿ ನೆನಪಿಲ್ಲ. ಸದರಿ ಜಮೀನು ನಮ್ಮ ಒಟ್ಟು ಕುಟುಂಬಕ್ಕೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

4. ಪ್ರತಿವಾದಿ ನಂ.3 ರವರು ಸಲ್ಲಿಸಿರುವ ದಾಖಲೆಗಳನ್ನು ನೋಡಿದ್ದೇನೆ. ನಾನು ನನ್ನ ಪ್ರತಿವಾದ ಪತ್ರದಲ್ಲಿ ಪ್ರತಿವಾದಿ ನಂ.3 ರವರು ಸಲ್ಲಿಸಿರುವ

ದಾಖಲೆಗಳ ಕುರಿತು ತಕರಾರು ಸಲ್ಲಿಸಿದ್ದೇನೆ. ಪ್ರತಿವಾದಿ ನಂ.3 ರವರು ನಿಮ್ಮ ಬಳಿ ಒಟ್ಟು ಕುಟುಂಬದ ಆದಾಯ ಇದೆ ಎಂದು 2 ಲಕ್ಷ ರೂಪಾಯಿ ಪಡೆದಿದ್ದರು ಎಂದರೆ ಸಾಕ್ಷಿಯು ಕೈಗಡ ಸಾಲವಾಗಿ 2 ಲಕ್ಷ ರೂಪಾಯಿ ಪಡೆದ್ದಿರು ಎಂದು ಹೇಳುತ್ತಾರೆ. ಪ್ರತಿವಾದಿ ನಂ.3 ರವರು ಸದರಿ ಹಣವನ್ನು ಮರುಪಾವತಿ ಮಾಡಿಲ್ಲ. ಪ್ರತಿವಾದಿ ನಂ.3 ರವರು ಸಲ್ಲಿಸಿರುವ ದಾಖಲೆಯಲ್ಲಿ ತಮ್ಮ ಆದಾಯದ ಕುರಿತು ಕೊಟ್ಟಿರುವ ದಾಖಲೆಗಳಲ್ಲಿ 2 ಲಕ್ಷ ರೂಪಾಯಿ ಮರುಪಾವತಿ ಮಾಡಿರುವ ಕುರಿತು ದಾಖಲೆ ಹಾಜರು ಮಾಡಿದ್ದಾರೆ ಎಂದರೆ ಸಾಕ್ಷಿಯು ನಾನು ಕೈಗಡ ಸಾಲವನ್ನು ಹಿಂದಕ್ಕೆ ಕೊಟ್ಟಿಲ್ಲ ಎಂದು ಈಗಾಗಲೆ ತಿಳಿಸಿದ್ದೇನೆ ಎಂದು ಹೇಳುತ್ತಾರೆ. ನಾನು ಪ್ರತಿವಾದಿ ನಂ.3 ರವರು ಸದರಿ ಹಣವನ್ನು ಮರುಪಾವತಿ ಮಾಡಬಹುದು ಎನ್ನುವ ಉದ್ದೇಶ ಇಟ್ಟುಕೊಂಡು ಅವರಿಂದ ಸದರಿ ಹಣದ ವಸೂಲಾತಿಗಾಗಿ ಕ್ರಮ ತೆಗೆದುಕೊಂಡಿಲ್ಲ. ಪ್ರತಿವಾದಿ ನಂ.3 ರವರು ತಮ್ಮ ವಕೀಲ ವೃತ್ತಿ ಆರಂಭ ಮಾಡಿದಾಗಿನಿಂದ ಇಲ್ಲಿಯವರೆಗೆ ಆದಾಯ ತೆರಿಗೆ ಕಟ್ಟುತ್ತಿದ್ದು, ಸದರಿ ಆದಾಯ ತೆರಿಗೆಯ ರಿಟರ್ನ್ಸ್ ನ್ಯಾಯಾಲಯಕ್ಕೆ ಹಾಜರು ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಎಲ್ಲಾ ವಿಚಾರದ ಮಾಹಿತಿ ಇದ್ದರು ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನಿಮ್ಮ ಒಟ್ಟು ಕುಟುಂಬದ ಆಸ್ತಿಗಳು ಇದ್ದು

ಸದರಿ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ತಕರಾರು ಸಲ್ಲಿಸಿ, ನಾನು ಸುಳ್ಳು ಸಾಕ್ಷಿನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**( ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ ಸಿ,**
**ಖಾನಾಪೂರ .**